(ಲಕ್ಷ ರೂಗಳು)

ಸಂ	ಯೋಜನೆ	ಸವಣೂರು	ಶಿಗ್ಗಾಂವ್
1	ಐಸೋಪಾಮ್	12 25	14 51
2	ಸಸ್ಯ ಸಂರಕ್ಷಣೆ	0 60	0 67
3	ಕೃಷಿ ಯಾಂತ್ರೀಕರಣ	25 83	27 37
4	ಕೃಷಿ ಸಂಸ್ಕರಣೆ	4 30	7 15
5	ಎತ್ತು ವಿತರಣೆ	4 60	4 60
6	ಸಾವಯುವ ಕೃಷಿ	3 23	4 18
7	ಇತರೆ ಯೋಜನೆಗಳು	18 09	9 39
	ಒಟ್ಟು	**68 90**	**67 87**

(ಆ) ಹೌದು

(ಇ) ಪರಿಹಾರ ನೀಡುವ ವಿಷಯವನ್ನು ಪ್ರಕೃತಿ ವಿಕೋಪ ಪರಿಹಾರ ನಿಧಿ ಮಾರ್ಗಸೂಚಿ ಪ್ರಕಾರ ಕಂದಾಯ ಇಲಾಖೆ ಪರಿಶೀಲಿಸುತ್ತದೆ

(ಈ) ಹೌದು

(ಉ) ಈ ತಾಲ್ಲೂಕುಗಳಲ್ಲಿ ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುವ ಸಲುವಾಗಿ ಸುಜಲಾ ಯೋಜನೆಯಡಿ 2006–07ನೇ ಸಾಲಿನಲ್ಲಿ 3 72 ಲಕ್ಷ ರೂಗಳನ್ನು ಬಿಡುಗಡೆ ಮಾಡಲಾಗಿದೆ

(ಊ) ಹೌದು

(ಋ) Random ಆಗಿ ಸರ್ವೇ ಮಾಡಿಸಿ ಒಂದು ತಿಂಗಳೊಳಗಾಗಿ ಒದಗಿಸಲಾಗುವುದು

762 (1027) ಶ್ರೀ ಶ್ರೀನಿವಾಸಗೌಡ ಕೆ (ಕೋಲಾರ) –ತೋಟಗಾರಿಕೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ರಾಜ್ಯದಲ್ಲಿ ಹನಿ ನೀರಾವರಿಗೋಸ್ಕರ ಶೇ 100 ರಷ್ಟು ಸಬ್ಸಿಡಿ ನೀಡಿರುವಂತಹ ಜಿಲ್ಲೆಗಳಾವುವು,

(ಆ) ಶೇ 100 ರಷ್ಟು ಸಬ್ಸಿಡಿ ಪ್ರಕಾರ ಹನಿ ನೀರಾವರಿ ಮತ್ತು ತುಂತುರು ನೀರಾವರಿ ಯೋಜನೆಯಲ್ಲಿ ಅಳವಡಿಸಲಾದ ಜಮೀನಿನ ವಿಸ್ತೀರ್ಣವೆಷ್ಟು,

(ಇ) ಕಳೆದ 2 ವರ್ಷಗಳಿಂದ ಬಂದಂತಹ ಅರ್ಜಿಗಳೆಷ್ಟು, ಉಳಿದಿರುವ ಅರ್ಜಿಗಳೆಷ್ಟು, (ಜಿಲ್ಲಾವಾರು ವಿವರ ನೀಡುವುದು)

ಶ್ರೀ ಶಶಿಕಾಂತ ಅ ನಾಯಕ (ತೋಟಗಾರಿಕೆ ಸಚಿವರು) –

(ಅ) ರಾಜ್ಯದಲ್ಲಿ ಬಿಜಾಪುರ ಮತ್ತು ಕೋಲಾರ ಜಿಲ್ಲೆಗಳಲ್ಲಿ ಹನಿ ನೀರಾವರಿಗೆ ಶೇ 100 ಸಬ್ಸಿಡಿ ನೀಡಲಾಗುತ್ತಿದೆ

(ಆ) 2003–04 ನೇ ಸಾಲಿನಿಂದ ಬಿಜಾಪುರ ಮತ್ತು ಕೋಲಾರ ಜಿಲ್ಲೆಗಳಲ್ಲಿ ಒಟ್ಟು 7739 ಹೆಕ್ಟೇರ್ ಪ್ರದೇಶದಲ್ಲಿ ಶೇ 100 ಸಬ್ಸಿಡಿ ಪ್ರಕಾರ ಹನಿ ನೀರಾವರಿ ಅಳವಡಿಸಲಾಗಿದೆ

(ಇ) ಕಳೆದ ಎರಡು ವರ್ಷಗಳಲ್ಲಿ ಬಿಜಾಪುರ ಮತ್ತು ಕೋಲಾರ ಜಿಲ್ಲೆಗಳಲ್ಲಿ ಬಂದಂತಹ ಅರ್ಜಿಗಳ ಸಂಖ್ಯೆ ಅನುಕ್ರಮವಾಗಿ 4014 ಮತ್ತು 2276 ಹಾಗೂ ಉಳಿಕೆ ಇರುವ ಅರ್ಜಿಗಳ ಸಂಖ್ಯೆ 1605 ಮತ್ತು 1070

763 (1028) ಶ್ರೀ ಶ್ರೀನಿವಾಸಗೌಡ (ಕೋಲಾರ) –ಸಹಕಾರ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ವೈದ್ಯನಾಥನ್ ವರದಿಯನ್ನು ಸಹಕಾರ ಕಾಯ್ದೆಗೆ ಅಳವಡಿಸಲು ರಾಜ್ಯ ಸರ್ಕಾರಕ್ಕೆ ಸೂಚನೆ ಯಾವಾಗ ಬಂದಿರುತ್ತದೆ ?

(ಆ) ವೈದ್ಯನಾಥನ್ ವರದಿ ಜಾರಿ ಮಾಡುವುದರಿಂದ ರಾಜ್ಯದಲ್ಲಿನ ಎಲ್ಲಾ ಜಿಲ್ಲಾ ಸಹಕಾರ ಬ್ಯಾಂಕ್‌ಗಳಿಗೆ ಬರುವ ಅನುದಾನವೆಷ್ಟು ?

(ಇ) ವೈದ್ಯನಾಥನ್ ವರದಿಯನ್ನು ಜಾರಿ ಮಾಡಲಾಗುವುದೇ ?

(ಈ) ಹಾಗಿದ್ದಲ್ಲಿ, ಯಾವಾಗ ಜಾರಿಗೊಳಿಸಲಾಗುವುದು ?

ಶ್ರೀ ಜಿ ಟಿ ದೇವೇಗೌಡ (ಸಹಕಾರ ಸಚಿವರು) –

(ಅ) ಭಾರತ ಸರ್ಕಾರವು ಸಹಕಾರಿ ಕೃಷಿ ಪತ್ತಿನ ಸಂಘಗಳ ಪುನಃಶ್ಚೇತನದ ಬಗ್ಗೆ ಪ್ರೊ.ಎ ವೈದ್ಯನಾಥನ್‌ರವರ ಅಧ್ಯಕ್ಷತೆಯಲ್ಲಿ ರಚಿಸಿದ ಕಾರ್ಯಪಡೆಯು ದಿನಾಂಕ 15 02 2005 ರಂದು ಭಾರತ ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿರುತ್ತದೆ ಭಾರತ ಸರ್ಕಾರವು ಸದರಿ ಕಾರ್ಯಪಡೆಯ ವರದಿಯನ್ನು ತತ್ವಶಃ (in-principle) ಒಪ್ಪಿಕೊಂಡು ತತ್ಸಂಬಂಧದ ಶಿಫಾರಸ್ಸುಗಳನ್ನು ಅನುಷ್ಠಾನಕ್ಕೆ ತರುವ ದಿಸೆಯಲ್ಲಿ ರಾಜ್ಯ ಸರ್ಕಾರಗಳೊಡನೆ ಸಮಾಲೋಚಿಸಿ ಸೆಪ್ಟೆಂಬರ್–ಅಕ್ಟೋಬರ್ 2005 ರಲ್ಲಿ ಪರಿಷ್ಕೃತ ಪುನಶ್ಚೇತನ ಪ್ಯಾಕೇಜನ್ನು ರೂಪಿಸಿರುತ್ತದೆ ಸದರಿ ಪುನಶ್ಚೇತನ ಪ್ಯಾಕೇಜನ್ನು ಒಪ್ಪಿಕೊಳ್ಳಲು ರಾಜ್ಯ ಸರ್ಕಾರಗಳಿಗೆ ಕಳುಹಿಸಿರುತ್ತದೆ